ಇ) 14 ಜನರು.

ಭೂಸಾರ ಸಂರಕ್ಷಣಾ ಕಾಮಗಾರಿಯಲ್ಲಿ ಅವ್ಯವಹಾರ

3008 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭೂಸಾರ ಸಂರಕ್ಷಣಾ ಕಾಮಾಗಾರಿಗೆ ಸಂಬಂಧಪಟ್ಟಂತೆ ಹಣ ದುರುಪಯೋಗ ಆರೋಪದ ಮೇಲೆ ಬೀದರ್ ಜಿಲ್ಲಾ ಉಪ ಕೃಷಿ ನಿರ್ದೇಶಕರು ಸೇರಿದಂತೆ ಒಟ್ಟು ಜನರನ್ನು ಅಮಾನತ್ತು ಮಾಡಲಾಗಿದೆ? ಹುದ್ದೆವಾರು ವಿವರ ನೀಡುವುದು?

ಆ) ಇವರ ಮೇಲೆ ಮಾಡಲಾಗಿದ್ದ ಆರೋಪಗಳೇನು? ವಿವರ ನೀಡುವುದು?

ಇ) ಇವರ ಮೇಲೆ ಅಮಾನತ್ತು ಆದೇಶವನ್ನು ಹಿಂದಕ್ಕೆ ಪಡೆಯಲಾಗಿದೆಯೆ? ಹಾಗಿದ್ದರೆ ಕಾರಣವೇನು?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :

ಅ) ಒಟ್ಟು 20 ಜನ ಅಧಿಕಾರಿ / ನೌಕರರನ್ನು ಅಮಾನತ್ತುಗೊಳಿಸಲಾಗಿದೆ. ಹುದ್ದೆವಾರು ವಿವರ ನೀಡಿದೆ,

ಉಪಕೃಷಿ ನಿರ್ದೇಶಕರು	:	1 (ಒಂದು)
ಸಹಾಯಕ ಕೃಷಿ ನಿರ್ದೇಶಕರು	:	4 (ನಾಲ್ಕು)
ಕೃಷಿ ಅಧಿಕಾರಿ	:	2 (ಎರಡು)
ಸಹಾಯಕ ಕೃಷಿ ಅಧಿಕಾರಿ	:	6 (ಆರು)
ಕೃಷಿ ಸಹಾಯಕ	:	7 (ಏಳು)

ಆ) ಜೂನ್ 1999ರ ಅವಧಿಯಲ್ಲಿ ಒಟ್ಟು ರೂ. 122.226 ಲಕ್ಷಗಳನ್ನು ಬೀದರ್ ಜಿಲ್ಲೆಯ 5 ತಾಲ್ಲೂಕುಗಳಿಂದ ಹಣವನ್ನು ಖಜಾನೆಯಿಂದ ನಗದೀಕರಿಸಲಾಗಿತ್ತು. ರೂ. 81.557 ಲಕ್ಷಗಳನ್ನು ಅನುಷ್ಠಾನಕ್ಕೆ ವೆಚ್ಚ ಮಾಡಿ ಇನ್ನುಳಿದ 46.66 ಲಕ್ಷಗಳನ್ನು ವೆಚ್ಚ ಮಾಡದೆ ಸಂಪೂರ್ಣ ಹಣ ಕಾರ್ಯಕ್ರಮಕ್ಕಾಗಿ ವಿನಿಯೋಗವಾಗಿದೆ, ಎಂದು ನಮೂದಿಸಲಾಗಿದೆ ಹಾಗೂ ಪ್ರಗತಿಯ ವರದಿಯಲ್ಲಿ ನಿಗದಿತ ಅವಧಿಯಲ್ಲಿ ಎನ್.ಡಿ.ಸಿ.ಬಿಲ್ಲುಗಳನ್ನು ಹಾಗೂ ಪ್ರವಾಸ ದಿನಚರಿಗಳನ್ನು ಸಲ್ಲಿಸದ ಸದರಿ ಹಣವನ್ನು ತಾತ್ಕಾಲಿಕವಾಗಿ ದುರುಪಯೋಗ ಪಡಿಸಿಕೊಂಡು ಕರ್ತವ್ಯಕ್ಕೆ ಚ್ಯುತಿ ಮಾಡಲಾಗಿದೆ. ಈ ಆರೋಪವನ್ನಾಧರಿಸಿ ಅಧಿಕಾರಿ/ನೌಕರರುಗಳನ್ನು ಅಮಾನತ್ತುಗೊಳಿಸಿ ಈಗಾಗಲೇ ಎಲ್ಲಾ ಆರೋಪ ಪಟ್ಟಿಗಳನ್ನು ಜಾರಿ ಮಾಡಿ ನಿಯಮಾನುಸಾರ ವಿಚಾರಣೆ ನಡೆಸಲು ಕ್ರಮ ಕೈಗೊಳ್ಳಲಾಗಿದೆ.

ಇ) ಆಪಾದಿತ ಎಲ್ಲಾ ಅಧಿಕಾರಿ / ನೌಕರರನ್ನು ಅಮಾನತ್ತಿನಿಂದ ನಿಖಂಡನೆಗೊಳಿಸಿ ಸರ್ಕಾರಿ

ಆದೇಶ ಸಂಖ್ಯೆ:ಕೃತೋಇ:44:ಕೃಪವಿ:99, ಬೆಂಗಳೂರು, ದಿನಾಂಕ:18-12-1999ರನ್ವಯ ಮರು ನೇಮಕಾತಿ ಮಾಡಲಾಗಿರುತ್ತದೆ. ಅಮಾನತ್ತಿನ ಅವಧಿಯು ಆರು ತಿಂಗಳಿಗಿಂತ ಮೇಲಾಗಿದ್ದರಿಂದ ಹಾಗೂ ವಿಚಾರಣೆಯನ್ನು ನಿಯಮಾನುಸಾರ ಕ್ರಮ ಕೈಗೊಳ್ಳಲು ಹೆಚ್ಚಿನ ಕಾಲಾವಕಾಶ ಬೇಕಾಗಿರುವುದರಿಂದ ವಿಚಾರಣೆ ಬಾಕಿ ಇಟ್ಟು ವಿಖಂಡನೆಗೊಳಿಸಲಾಗಿದೆ.

ರಾಜ್ಯದಲ್ಲಿ ನಕಲಿ ಸ್ಟ್ಯಾಂಪ್ ಕಾಗದ ಮಾರಾಟ

3009 - ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ಶಿವಾಜಿನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಸ್ಟ್ಯಾಂಪ್ ಕಾಗದಗಳ ಮಾರಾಟದಿಂದ 1999-2000ನೇ ಸಾಲಿನಲ್ಲಿ ಬಂದ ವರಮಾನವೆಷ್ಟು?*

ಆ) *2000-2001ನೇ ಸಾಲಿನಲ್ಲಿ ಇದರಿಂದ ಬರಲಿರುವ ಅಂದಾಜು ವರಮಾನವೆಷ್ಟು?*

ಇ) *ರಾಜ್ಯದಲ್ಲಿ ನಕಲಿ ಸ್ಟ್ಯಾಂಪ್ ಕಾಗದ ಮಾರಾಟವಾಗುತ್ತಿರುವುದು ಪತ್ತೆಯಾಗಿದೆಯೇ?*

ಈ) *ಹಾಗಿದ್ದಲ್ಲಿ ಎಷ್ಟು ಮೌಲ್ಯದ ನಕಲಿ ಸ್ಟ್ಯಾಂಪ್ ಕಾಗದ ಪತ್ತೆಯಾಗಿದೆ?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಸುಮಾರು 598.41 ಕೋಟಿ ರೂಪಾಯಿಗಳು.

ಆ) ಸುಮಾರು 675.43 ಕೋಟಿ ರೂಪಾಯಿಗಳು.

ಇ) ಹೌದು.

ಈ) ಸುಮಾರು ರೂ.10 ಕೋಟಿ ರೂಪಾಯಿಗಳು.

ಉ) 1. ಫ್ರಾಂಕಿಂಗ್ ಮೆಷಿನ್ ಅನ್ನು ಉಪಯೋಗಿಸಲು ನಿಯಮಗಳನ್ನು ರಚಿಸಲಾಗುತ್ತಿದೆ.

2. ಮುದ್ರಾಂಕ ಶುಲ್ಕವನ್ನು ಡಿಮ್ಯಾಂಡ್ ಡ್ರಾಫ್ಟ್, ಚಲನ್, ಪೇ ಆರ್ಡರ್ ಮತ್ತು ನಗದುಗಳ ಮೂಲಕ ಪಾವತಿ ಮಾಡಲು ನಿಯಮಗಳಲ್ಲಿ ಅವಕಾಶ ಮಾಡಿಕೊಡಲಾಗಿದೆ.

3. ಖಾಸಗಿ ಸ್ಟ್ಯಾಂಪ್ ವೆಂಡರ್‌ಗಳಿಗೆ

ರಾಜ್ಯದಲ್ಲಿ ಮುಸುಕಿನ ಜೋಳ ಖರೀದಿ ಕೇಂದ್ರ ಸ್ಥಾಪನೆ

3010 - ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ಶಿವಾಜಿನಗರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಉತ್ಪನ್ನವಾಗಿರುವ ಮುಸುಕಿನ ಜೋಳದ ಪ್ರಮಾಣವೆಷ್ಟು?*